ಆಯುರ್ವೇದಿಕ್ ಆಸ್ಪತ್ರೆ ಆಗಬಹುದು, ಆಲೋಪತಿಕ್ ಆಸ್ಪತ್ರೆಯಾಗಬಹುದು, ಯಾವುದೇ ಆಗ ಬಹುದು. ಒಟ್ಟಿನಲ್ಲಿ ಇಷ್ಟು ಜನರಿಗೆ ಒಂದು ಆಸ್ಪತ್ರೆ ಇರಬೇಕೆಂಬ ಅಭಿಪ್ರಾಯವಿದೆ. ಇದರ ಬಗ್ಗೆ ಕೇಂದ್ರ ಸರಕಾರದ ಒಂದು ನೀತಿಯಿದೆ. ಅದರ ಪ್ರಕಾರ ಇಷ್ಟೇ ದಿವಸದಲ್ಲಿ ಆಸ್ಪತ್ರೆ ಬರುವುದು ಎಂದು ಹೇಳುವುದಕ್ಕಾಗುವುದಿಲ್ಲ. ಇದು ಕೊನೇ ಗುರಿ.

ಶ್ರೀ ಎಂ. ನಂಜೇಗೌಡ.—ಈ ವಿಚಾರವಾಗಿ ಮೊಟ್ಟ ಮಾತನಾಡಿದಾಗ ಎಂಟೂವರೆ ಸಾವಿರ ರೂಪಾಯಿ ಅಲ್ಲದೆ ಇನ್ನೂ ಹೆಚ್ಚಿಗೆ ಹಣಕೊಟ್ಟರೆ ಆಸ್ಪತ್ರೆ ಕೊಡಲು ಸಾಧ್ಯ ಎಂದು ಹೇಳಿದ್ದಂತೆ ಹಾಗೆ ಕೊಟ್ಟರೆ ಆಸ್ಪತ್ರೆಕೊಡಲು ಸಾಧ್ಯವೇ ?

ಶ್ರೀ ಎಚ್. ಸಿದ್ದವೀರಪ್ಪ.—ಕಟ್ಟಡ ಕೊಡಬೇಕು, ಡಾಕ್ಟರುಗಳಿಗೆ ಇರುವುದಕ್ಕೆ ಜಾಗ ಕೊಡಬೇಕು, ಬಾಕಿ ಮೆಡಿಕಲ್ ಸ್ಟ್ಯಾಫ್‌ಗೆ ಅವಕಾಶ ಮಾಡಬೇಕು. ಇಷ್ಟೆರ್ನಾ ಮಾಡಿಕೊಟ್ಟರೆ ರೆಕರಿಂಗ್ ಎಕ್ಸ್‌ಪೆಂಡಿಚರ್ ಬೇಕಾದರೆ ಸರಕಾರದಿಂದ ಕೊಡುತ್ತೇವೆ.

Varahi Project

485. **Sri S. M. SHEERNALY CHANDRASEKHAR** (Hosanagar).—

Will the Minister for Public Works aud Electricity be pleased to state.—

(*a*) whether the Varahi project would be taken up in the year 1973-74 ;

(*b*) whether the Government has published in the Gazette about the area that comes under submersion ;

(*c*) the action the Government propose to take for rehabilitation of the people who will be affected by the above said project ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) No.

(*c*) A detailed scheme to rehabilitate the people coming within the submersion area will be worked out in due course.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮುಳುಗಡೆಯಾಗುವ ಪ್ರದೇಶದವರಿಗೆ ಪುನ ರ್ವಸತಿ ಯೋಜನೆ ಮಾಡುತ್ತಿದ್ದೀರಾ ? ಯಾವ ಗ್ರಾಮಗಳು ಮುಳುಗಡೆಯಾಗುವುವು ಎಂಬು ದನ್ನು ಹೇಳುವಿರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ನಕಾಲದಲ್ಲಿ ಪಬ್ಲಿಕೇಷನ್ ಕೊಡುತ್ತೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮುಳುಗಡೆ ಪ್ರದೇಶವರಿಗೆ ಪುನರ್ವಸತಿಗೆ ಸಂಬಂಧಪಟ್ಟ ಕೆಲಸಕಾರ್ಯ ಎಷ್ಟು ದಿವಸದಲ್ಲಿ ಪ್ರಾರಂಭವಾಗುವುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಪ್ರಾರಂಭಿಸಿರುವುದು ಪ್ರಿಲಿಮಿನರಿ ಕೆಲಸ ಮಾತ್ರ. ಅದಾದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಸಕಾಲದಲ್ಲಿ ಪುನರ್ವಸತಿಗೆ ತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ವರಾಹಿ ನದಿಯಿಂದ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ಯೋಜನೆ ಕೈಗೊಂಡಿದ್ದಾರೆ ಎಂದು ಕೇಳಿದ್ದೇನೆ, ಇದನ್ನು ಕೈಬಿಟ್ಟು ಶಿವಮೊಗ್ಗ, ಚಿತ್ರದುರ್ಗ ಹುಮ್ಚ, ತುಮಕೂರು ಜಿಲ್ಲೆಗಳಿಗೆ ನೀರು ಸರಬರಾಜು ಮಾಡಬೇಕು ಎಂದು ಹೇಳಿ ತುಮಕೂರು ಜಿಲ್ಲೆಯ ಶಾಸಕರು ಈಗಾಗಲೇ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ ; ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮನವಿಗಳು ನನ್ನ ಹತ್ತಿರ ಇಲ್ಲ, ಆದಾಗ್ಯೂ ಕೂಡ ವರಾಹಿ ನದಿಯಿಂದ ಇರಿಗೇಷನ್ ಅಭಿವೃದ್ಧಿ ಮಾಡುವ ಸಾಧ್ಯಸಾಧ್ಯತೆಗಳನ್ನು ಆಲೋಚನೆಮಾಡಿ, ಎರಡಕ್ಕೂ ರಾಜಧರ್ಮಕವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಗೊತ್ತಾಗಿದೆ. ಇದರಿಂದ ಇರಿಗೇಷನ್ ಮಾಡುವುದು ರಾಜಧರ್ಮಕವೇ. ಪವರ್ ಪ್ರಾಜೆಕ್ಟ್ ಮಾಡುವುದು ರಾಜಧರ್ಮಕವೇ ಎಂದು ವಿಚಾರಮಾಡಿ ಕೆಲಸ ಮಾಡುತ್ತಿದ್ದೇವೆ.

ಶ್ರೀ ಎ. ಜಿ. ಕೊಡಗಿ.—ವರಾಹಿ ನದಿಯಿಂದ ನೀರಾವರಿ ಯೋಜನೆಯನ್ನು 1973-74ರಲ್ಲಿ ಕೈಗೊಳ್ಳುವುದಕ್ಕೆ ಯೋಜನೆ ಇದೆಯೇ ? ಇದನ್ನು ಇದೇ ವರ್ಷದಲ್ಲಿ ಪ್ರಾರಂಭಮಾಡುವ ಯೋಚನೆ ತಮಗೆ ಇದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಪ್ರಾರಂಭಮಾಡತಕ್ಕದ್ದು ಎಲ್ಲವೂ ಪ್ರಿಲಿಮಿನರಿ ವರ್ಕ್ಸ್. ಪ್ರಿಲಿಮಿನರಿ ವರ್ಕ್ಸ್ ವರಾಹಿನದಿಯಿಂದ ವಿದ್ಯುಚ್ಛಕ್ತಿಗೆ ಯೋಜನೆ ಮಾಡಿದರೂ ಬೇಕು, ಜಲ ಯೋಜನೆಯನ್ನು ಮಾಡಿದರೂ ಬೇಕು. ಎರಡಕ್ಕೂ ಪ್ರಿಲಿಮಿನರಿ ವರ್ಕ್ಸ್ ನಡೆಯುತ್ತಾ ಇದೆ. ಜಲವಿದ್ಯುತ್ ಯೋಜನೆ ಮಾಡಬೇಕೇ ಅಥವಾ ನೀರಾವರಿ ಯೋಜನೆ ಮಾಡಬೇಕೇ ಎಂದು ಎರಡನ್ನೂ ಸಮನ್ವಯ ಮಾಡಿ ಮಾಡಬೇಕು, ಎರಡನ್ನೂ ಯೋಚನೆ ಮಾಡುತ್ತಾ ಇದ್ದೇವೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಮುಳಗಡೆಯಾದ ರೈತರ ಸಮ್ಮೇಳನ 17ರಂದು ನಡೆದು 12 ಅಂಶದ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. ಮುಖ್ಯ ಮಂತ್ರಿಗಳಿಗೂ ಇದರ ಬಗ್ಗೆ ಮನವಿ ಪತ್ರ ಕೊಟ್ಟಿದ್ದೇವೆ. ಅದನ್ನು ಪರಿಶೀಲನೆಮಾಡಿ ಮನವಿ ಪತ್ರದ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮನವಿ ಪತ್ರ ನಮ್ಮ ಕೈಗೆ ಬಂದಮೇಲೆ ವಿಚಾರ ಮಾಡುತ್ತೇವೆ.

ಶ್ರೀ ಕೆ. ಯಂಕಟಪ್ಪ.—ಪ್ರಿಲಿಮಿನರಿ ಕೆಲಸ ಮುಗಿದ ಮೇಲೆ ಜಲಾಶಯ ಅಥವಾ ಪವರ್ ಪ್ರಾಜೆಕ್ಟ್ ಎಂದು ತೀರ್ಮಾನ ಮಾಡಲಾಗುತ್ತದೆ ಎಂದು ಹೇಳುತ್ತೀರಿ, ಆ ಪ್ರಿಲಿಮಿನರಿ ಕೆಲಸ ಯಾವಾಗ ಮುಗಿಯುತ್ತದೆ ? ಇದರಲ್ಲಿ ನೀರಾವರಿಗೆ ಅಗತ್ಯವಾಗಿ ಗಮನ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಿಲಿಮಿನರಿ ವರ್ಕ್ಸ್ ಯಾವಾಗ ಮುಗಿಯುತ್ತದೆ ಎಂದು ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ. ಪ್ರಿಲಿಮಿನರಿ ವರ್ಕ್ಸ್ ನಾನಾ ಅಂಗಗಳನ್ನು ಒಳಗೊಂಡಿದೆ. ಪ್ರಿಲಿಮಿನರಿ ವರ್ಕ್ಸ್ ನಡೆಯುತ್ತಾ ಇರುವುದರಿಂದ ಸೈಮಲ್ಟೇನಿಯಸ್‌ಆಗಿ ವಿಚಾರ ಮಾಡುವುದು, ವಿಚಾರ ಸರಣಿಯಾಗಿ ನಡೆದುಕೊಂಡು ಹೋಗುತ್ತದೆ.

Construction of Roads in Shikaripur Taluk

542. Sri K. YENKATAPPA (Shikaripur)—

Will the Minister for Public Works and Electricity be pleased to state.—

(*a*) whether the Government has prepared a list of road mileage to be constructed in Shikaripur taluk and its extent ;

(*b*) the towns which are proposed to be connected and the mileage of roads ;